ರಾಜ್ಯದಲ್ಲಿ ವಿದ್ಯುದ್ದೀಕರಣಗೊಳಿಸಿದ ಪಂಪುಸೆಟ್ಟುಗಳ ಸಂಖ್ಯೆಯ ಬಗ್ಗೆ

2684 - ಶ್ರೀ ಕೆ. ಲಕ್ಕಪ್ಪ (ಕುಣಿಗಲ್) : ಮಾನ್ಯ ಇಂಧನ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) 1990-91ನೇ ಸಾಲಿನಲ್ಲಿ ರಾಜ್ಯದಲ್ಲಿ ವಿದ್ಯುದ್ದೀಕರಣಗೊಳಿಸಿದ ಪಂಪುಸೆಟ್ಟುಗಳ ಸಂಖ್ಯೆ ಎಷ್ಟು?

ಆ) 1991-92ನೇ ಸಾಲಿನಲ್ಲಿ ಪಂಪುಸೆಟ್ಟುಗಳನ್ನು ವಿದ್ಯುದ್ದೀಕರಣಗೊಳಿಸಲು ನಿಗಧಿಪಡಿಸಿರುವ ಗುರಿ ಎಷ್ಟು?

ಇ) ಏಪ್ರಿಲ್ 1991ರಿಂದ ಜೂನ್ 1991ರ ಅಂತ್ಯದವರೆಗೆ ವಿದ್ಯುದ್ದೀಕರಣಗೊಳಿಸಿದ ಪಂಪುಸೆಟ್ಟುಗಳ ಸಂಖ್ಯೆ ಎಷ್ಟು?

ಈ) ತುಮಕೂರು ಜಿಲ್ಲೆಯಲ್ಲಿ ಈವರೆಗೆ ವಿದ್ಯುದ್ದೀಕರಣಗೊಳಿಸಲಾದ ಪಂಪುಸೆಟ್ಟುಗಳ ಸಂಖ್ಯೆ ಮತ್ತು ಬಾಕಿ ಉಳಿದಿರುವ ಅರ್ಜಿಗಳ ಸಂಖ್ಯೆ ಎಷ್ಟು?

ಶ್ರೀ ಎಂ. ರಾಮಪ್ಪ (ಇಂಧನ ರಾಜ್ಯ ಮಂತ್ರಿಗಳು) :

ಅ) 1990-91ನೇ ಸಾಲಿನಲ್ಲಿ ರಾಜ್ಯದಲ್ಲಿ 70,138 ಪಂಪುಸೆಟ್ಟುಗಳನ್ನು ವಿದ್ಯುದ್ದೀಕರಣಗೊಳಿಸಲಾಗಿದೆ.

ಆ) 1991-92ನೇ ಸಾಲಿನಲ್ಲಿ 60,000ಪಂಪುಸೆಟ್ಟುಗಳನ್ನು ವಿದ್ಯುದ್ದೀಕರಣಗೊಳಿಸಲು ಗುರಿ ಹಾಕಿಕೊಳ್ಳಲಾಗಿದೆ.

ಇ) ಏಪ್ರಿಲ್ 1991ರಿಂದ ಜೂನ್ 1991ರ ಅಂತ್ಯದವರೆಗೆ 8,748 ಪಂಪುಸೆಟ್ಟುಗಳನ್ನು ವಿದ್ಯುದ್ದೀಕರಣಗೊಳಿಸಲಾಗಿದೆ.

ಈ) 1991-92ನೇ ಸಾಲಿನಲ್ಲಿ ಏಪ್ರಿಲ್ 1991ರಿಂದ ಆಗಸ್ಟ್ 1991ರ ಅಂತ್ಯದವರೆಗೆ ತುಮಕೂರು ಜಿಲ್ಲೆಯಲ್ಲಿ 3,005 ಪಂಪುಸೆಟ್ಟುಗಳನ್ನು ವಿದ್ಯುದ್ದೀಕರಣಗೊಳಿಸಲಾಗಿದೆ. ಹಾಗೂ ಜುಲೈ 1991ರ ಅಂತ್ಯದವರೆಗೆ 2,478 ಐ.ಪಿ.ಸೆಟ್ಟ್ ಅರ್ಜಿಗಳು ತುಮಕೂರು ಜಿಲ್ಲೆಯಲ್ಲಿ ಬಾಕಿ ಉಳಿದಿರುತ್ತವೆ.

1990-91ನೇ ಸಾಲಿನಲ್ಲಿ ವಿದ್ಯುತ್ ಶೇಕಡಾವಾರು ಪ್ರಸರಣಾ ನಷ್ಟದ ಬಗ್ಗೆ.

2842 - ಶ್ರೀ ಪೆರಿಕಲ್ ಎಂ. ಮಲ್ಲಪ್ಪ (ಚಿಕ್ಕಪೇಟೆ) : ಮಾನ್ಯ ಇಂಧನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) 1990-91ನೇ ಸಾಲಿನಲ್ಲಿ ಶೇಕಡಾವಾರು ಪ್ರಸರಣಾ ನಷ್ಟವೆಷ್ಟು?

ಆ) ಮೇಲ್ಕಂಡ ಅವಧಿಯಲ್ಲಿ ಉಂಟಾದ ಪ್ರಸರಣಾ ನಷ್ಟದಿಂದ ಅನುಭವಿಸಿದ ನಷ್ಟವೆಷ್ಟು?

ಇ) ಅಖಿಲ ಭಾರತ ಮಟ್ಟದ ಸರಾಸರಿ ಪ್ರಸರಣಾ ನಷ್ಟವೆಷ್ಟು?

ಈ) ಪ್ರಸರಣಾ ನಷ್ಟವನ್ನು ಕಡಿಮೆ ಮಾಡಲು ಸರ್ಕಾರವು ತೆಗೆದುಕೊಂಡ ಕ್ರಮಗಳೇನು?

ಶ್ರೀ ಎಂ. ರಾಮಪ್ಪ (ಇಂಧನ ರಾಜ್ಯ ಸಚಿವರು) :

ಅ) 1990-91ನೇ ಸಾಲಿನಲ್ಲಿ ವಿದ್ಯುಚ್ಛಕ್ತಿ ವಿತರಣೆ ಮತ್ತು ಪ್ರಸರಣೆಯಲ್ಲಿ ಉಂಟಾದ ನಷ್ಟ ಶೇಕಡ 19.6 (ತಾತ್ಕಾಲಿಕ)

ಆ) 1990-91ನೇ ಸಾಲಿನ ವಿದ್ಯುಚ್ಛಕ್ತಿ ಪ್ರಸರಣಾ ಮತ್ತು ವಿತರಣಾ ನಷ್ಟದಿಂದ 2,968 ದಶಲಕ್ಷ ಯೂನಿಟ್ಟುಗಳ (ತಾತ್ಕಾಲಿಕ) ವಿದ್ಯುತ್ ನಷ್ಟವುಂಟಾಗಿದೆ.

ಇ) 1988-89ನೇ ಸಾಲಿನಲ್ಲಿ ಅಖಿಲ ಭಾರತ ಮಟ್ಟದಲ್ಲಿ ಶೇಕಡ 22.31 ರಷ್ಟು ಪ್ರಸರಣಾ ನಷ್ಟವುಂಟಾಗಿದೆ.

ಈ) ಪ್ರಸರಣಾ ಮತ್ತು ವಿತರಣಾ ವ್ಯವಸ್ಥೆಯಲ್ಲಿನ ನಷ್ಟವನ್ನು ಕಡಿಮೆ ಮಾಡಲು ಈ ಕೆಳಕಂಡ ಕ್ರಮವನ್ನು ತೆಗೆದುಕೊಂಡಿದ್ದು ಇದೊಂದು ಮುಂದುವರಿಯುವ ನಿರಂತರ ವ್ಯವಸ್ಥೆಯಾಗಿದೆ :

1) ಹೆಚ್ಚು ಹೆಚ್ಚಾಗಿ ಹೊಸ ಪ್ರಸರಣಾ ಲೈನುಗಳನ್ನು ಹೊಸ ಸ್ವೀಕರಣಾ ಕೇಂದ್ರಗಳು ಮತ್ತು ಹೊಸ ವಿದ್ಯುತ್ ಉಪಕೇಂದ್ರಗಳನ್ನು ನಿರ್ಮಾಣ ಮಾಡುವುದು ಮತ್ತು ಟ್ಯಾಪ್-ಆಫ್ ಸ್ಟೇಷನ್‌ಗಳನ್ನು ಪ್ರಾರಂಭಿಸುವುದು.

2) ಈಗಿರುವ ಉಪಕೇಂದ್ರಗಳಲ್ಲಿ ಮತ್ತು ಸ್ವೀಕರಣಾ ಕೇಂದ್ರಗಳಲ್ಲಿ ಕೆಪಾಸಿಟರ್ ಬ್ಯಾಂಕ್‌ಗಳನ್ನು ಅಳವಡಿಸುವುದು.

3) ಈಗಿರುವ ವಿದ್ಯುತ್ ಉಪಕೇಂದ್ರಗಳನ್ನು ವಿದ್ಯುತ್ ಪರಿವರ್ತಕಗಳ ಸಾಮರ್ಥ್ಯವನ್ನು ಹೆಚ್ಚಳಗೊಳಿಸುವುದು.

4) 11 ಕೆ.ವಿ. ಎಕ್ಸ್‌ಪ್ರೆಸ್ ಲೈನುಗಳನ್ನು ನಿರ್ಮಾಣ ಮಾಡುವುದು ಮತ್ತು ವಿತರಣಾ ವ್ಯವಸ್ಥೆಯಲ್ಲಿ ಈಗಿರುವ ಲೈನುಗಳನ್ನು ಹೆಚ್ಚಿನ ಗಾತ್ರದ ಕಂಡಕ್ಟರುಗಳನ್ನು ಅಳವಡಿಸಿ ಬಲಪಡಿಸುವುದು.

5) 11 ಕೆ.ವಿ. ಫೀಡರುಗಳಲ್ಲಿ ಶಂಟ್ ಕೆಪಾಸಿಟರುಗಳನ್ನು ಅಳವಡಿಸುವುದು.

6) ಬೃಹತ್ ನಗರ ಮತ್ತು ಪಟ್ಟಣ ಪ್ರದೇಶಗಳಲ್ಲಿ ವಿತರಣಾ ವ್ಯವಸ್ಥೆಯನ್ನು ಉತ್ತಮಗೊಳಿಸಲು ಬೃಹತ್ ಯೋಜನೆಗಳನ್ನು ತಯಾರು ಮಾಡುವುದು.

ಬೆಂಗಳೂರು ವಿಶ್ವವಿದ್ಯಾಲಯದಲ್ಲಿರುವ ಹೊಸ ಕೋರ್ಸ್‌ಗಳ ಬಗ್ಗೆ

2824 - ಶ್ರೀ ಪೆರಿಕಲ್ ಎಂ. ಮಲ್ಲಪ್ಪ (ಚಿಕ್ಕಾಪೇಟೆ) : ಮಾನ್ಯ ಶಿಕ್ಷಣ ಮತ್ತು ಸಂಸದೀಯ ವ್ಯವಹಾರಗಳ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) 1991-92ನೇ ಸಾಲಿನಲ್ಲಿ ಬೆಂಗಳೂರು ವಿಶ್ವವಿದ್ಯಾಲಯದಲ್ಲಿ ಯಾವ ಹೊಸ ಕೋರ್ಸ್‌ಗಳು ಪ್ರಾರಂಭಿಸಲ್ಪಟ್ಟವು?

ಆ) ಪ್ರತಿಯೊಂದು ಕೋರ್ಸ್‌ಗಳ ಇನ್‌ಟೇಕ್‌ಷ್ಟು?

ಇ) ಕೋರ್ಸ್‌ಗಳನ್ನು ಯಾವ ಕಾಲೇಜಿನಲ್ಲಿ ಪ್ರಾರಂಭಿಸಲ್ಪಟ್ಟಿವೆ?

ಈ) ಈ ಹೊಸ ಕೋರ್ಸ್‌ಗಳಿಗೆ ಅಭ್ಯರ್ಥಿಗಳನ್ನು ಆಯ್ಕೆ ಮಾಡಲು ಸರ್ಕಾರ ಯಾವುದಾದರೂ ಮಾರ್ಗಸೂಚಿಯನ್ನು ನಿಗದಿಪಡಿಸಿದೆಯೇ?

ಶ್ರೀ ಎಂ. ವೀರಪ್ಪ ಮೊಯಿಲಿ (ಶಿಕ್ಷಣ ಮತ್ತು ಸಂಸದೀಯ ವ್ಯವಹಾರಗಳ ಸಚಿವರು):

ಅ) 1) ಬ್ಯಾಚಲರ್ ಡಿಗ್ರಿ ಇನ್ ಹೋಟೆಲ್ ಮ್ಯಾನೇಜ್‌ಮೆಂಟ್.

2) ಬ್ಯಾಚಲರ್ ಡಿಗ್ರಿ ಇನ್ ಬಿಜಿನೆಸ್ ಮ್ಯಾನೇಜ್‌ಮೆಂಟ್.

ಆ) 1) ಬ್ಯಾಚಲರ್ ಡಿಗ್ರಿ ಇನ್ ಹೋಟೆಲ್ ಮ್ಯಾನೇಜ್‌ಮೆಂಟ್-30 ಸೀಟ್‌ಗಳು.

2) ಬ್ಯಾಚಲರ್ ಡಿಗ್ರಿ ಇನ್ ಬಿಜಿನೆಸ್ ಮ್ಯಾನೇಜ್‌ಮೆಂಟ್ -40 ಸೀಟ್‌ಗಳು.